

**ಅಮರೇಶ ನುಗಡೋಣಿ**

ಕಲೆ: ವಿಶ್ವನಾಥ್ ಎ.ಎಸ್.

# ಒಂದು ಆತ್ಮಚರಿತ್ರೆಯ ಕಥೆ



1

ವೇದವತಿ ತನ್ನ ಮನೆ ಮುಂದೆ ಬಂದು ಸ್ಕೂಟರ್ ನಿಲ್ಲಿಸಿದಳು. ಇಳಿದು ಗೇಟ್ ತೆರೆದು ಸ್ಕೂಟರ್ ಒಳಗೆ ತಂದಳು. ಆಗಲೇ ಸಂಜೆಯಾಗಿತ್ತು. ಮನಸ್ಸು ದಣಿದಿತ್ತು. ಈಗ್ಗೆ ವಾರದಿಂದಲೂ ದೇಹವೂ ದಣಿಯುತ್ತಿತ್ತು. ಅಕ್ಕ-ಪಕ್ಕ ಕಣ್ಣು ಹಾಯಿಸಿದಾಗ ಮಕ್ಕಳು ರಸ್ತೆ ಮ್ಯಾಲೆನೇ ಆಡುತ್ತಿದ್ದವು. ಇನ್ನ ಬೀದಿ ದೀಪಗಳು ಕಣ್ಣು ತೆರೆದಿರಲಿಲ್ಲ. ಮನೆಯ ಲಾಕ್ ತೆಗೆದು ಒಳ ಬಂದು, ಪುನಃ ಬಾಗಿಲು ಮುಚ್ಚಿದಳು. ಮನೆಯಲ್ಲಿ ಕತ್ತಲಿತ್ತು. ಯಾವ ಸದ್ದೂ ಇರಲಿಲ್ಲ. ರೂಢಿ ಮ್ಯಾಲೆ ಹಾಲಿಗೆ ಬಂದು ಲೈಟ್ ಹಾಕಿದಳು. ಮನೆ ಹಸನವಾಗಿತ್ತು. ಕೆಲ್ಸದ ಹುಡುಗಿ ಆರತಿ ಬಂದು, ಕೆಲ್ಸ ಮುಗಿಸಿ ಹೋದದ್ದು ಕಾಣುತ್ತಿತ್ತು. ಬ್ಯಾಗ್ ಕೆಳಗಿಟ್ಟು ಬಾತ್‌ರೂಮಿಗೆ ಹೋದಳು. ಹತ್ತು ನಿಮಿಷದ ಮ್ಯಾಲೆ ಹೊರಬಂದಳು. ಚೂರು ಆಯಾಸ ಇಳಿದಂತಾಗಿತ್ತು. ನಾಳೆ ಬಿಟ್ಟು, ನಾಡದ್ದೇ ಸಂಜೆ ಅಪ್ಪ ಬರೆದಿದ್ದ ಆತ್ಮಚರಿತ್ರೆ ಪುಸ್ತಕ ಬಿಡುಗಡೆ ಸಮಾರಂಭವಿತ್ತು. ತಾನೇ ನಿಂತು ಮಾಡಬೇಕಾಗಿತ್ತು. ವಾರದಿಂದ ಅದರ ಸಂಬಂಧವೇ ತಿರುಗಾಡುತ್ತಿದ್ದಳು. ಆಗಬೇಕಿರುವ ಬಾಕಿ ಕೆಲ್ಸಗಳನ್ನು ನೆನೆಯುತ್ತ ಅಡಿಗೆ ಮನೆಗೆ ಬಂದಳು. ಒಲೆಮ್ಯಾಲೆ ಬಿಸಿ ಹಾಲಿತ್ತು. ಒಂದು ಚಿಕ್ಕ ಬಟ್ಟಲಲ್ಲಿ ಸವತೆಕಾಯಿ, ಕ್ಯಾರೆಟ್, ಮೊಳಕೆ ಕಾಳಿನ ಸಾಲಡ್ ಮಾಡಿಟ್ಟು ಹೋಗಿದ್ದಳು ಆರತಿ, ಸಮಾಧಾನವಾಯ್ತು. ಆ ಬಟ್ಟಲನ್ನು, ನೀರಿನ ಗ್ಲಾಸನ್ನು ಎತ್ತಿಕೊಂಡು ಹಾಲಿಗೆ ಬಂದು ಅಪ್ಪನ ಆರಾಮ ಕುರ್ಚಿಯಲ್ಲಿ ಕುಂತಳು. ನಿಟ್ಟುಸಿರು ತಾನಾಗೇ ಬಂದಿತು. ಎಷ್ಟೇ ಆಯಾಸ, ಸಿಟ್ಟು, ಬೇಸರ, ಒತ್ತಡಗಳಿದ್ದರೂ ಈ ಕುರ್ಚಿಯ ಮ್ಯಾಲೆ ಕುಂತರೆ, ಉಕ್ಕುವ ಹಾಲಿಗೆ ತುಸು ನೀರು ಹಾಕಿದರೆ ಇಳಿಯುವಂತೆ ಬತ್ತಿ ಹೋಗುತ್ತಿದ್ದವು. ಸಮಾಧಾನ ತನ್ನಿಂದ ತಾನೇ ಮನಸ್ಸು-ದೇಹವನ್ನು ಆವರಿಸಿದಂತಾಗುತ್ತಿತ್ತು. ಅಪ್ಪ ಶಾಂತಲಿಂಗಪ್ಪನ ಕುರ್ಚಿಯಿದು. ಶಿಷ್ಯನೊಬ್ಬ ತರಿಸಿ